SEPTEMBER 05, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

- **ಇಂದು, ರಾಷ್ಟ್ರೀಯ ಶಿಕ್ಷಕರ** ದಿನ; ರಾಷ್ಟ್ರಪತಿ ಅವರಿಂದ, ದೇಶದ 45 ಆದರ್ಶ ಶಿಕ್ಷಕರಿಗೆ, ರಾಷ್ಟ್ರ ಪ್ರಶಸ್ತಿ ಪ್ರದಾನ.
- **ಕೋಲಾರದಲ್ಲಿ ಇಂದು ಮತ್ತು ನಾಳೆ,** ಸಮುದಾಯ ಬಾನುಲಿ ಸಾಮರ್ಥ್ಯ ವರ್ಧನೆ, ಕಾರ್ಯಾಗಾರ.
- **'ಸಶಕ್ತ ಜೀವನಕ್ಕಾಗಿ, ಸರಿಯಾದ ಆಹಾರ'** ಧ್ಯೇಯ; ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹ, ನಾಡಿದ್ದು ಸಂಪನ್ನ.
- **ಇದೇ 13 ರಿಂದ 16ರ ವರೆಗೆ,** ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, ಕೃಷಿ ಮೇಳ.

<><><>

**ಇಂದು, ರಾಷ್ಟ್ರೀಯ ಶಿಕ್ಷಕರ** ದಿನ. ಖ್ಯಾತ ಪ್ರಾಧ್ಯಾಪಕ, ಶಿಕ್ಷಣ ತಜ್ಞ, ತತ್ವಜ್ಞಾನಿ ಹಾಗೂ ಮಾಜಿ ರಾಷ್ಟ್ರಪತಿ, ಭಾರತ ರತ್ನ ಸರ್ವೇಪಳ್ಳಿ ರಾಧಾಕೃ ಣ್ಣನ್ ಅವರ, ಜನ್ಮ ದಿನವಾದ ಇಂದು, ಆದರ್ಶ ಶಿಕ್ಷಕರನ್ನು, ಸ್ಮರಿಸಲಾಗುತ್ತದೆ.

<><><>

**ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು,** ಹೊಸ ದಿಲ್ಲಿಯ ವಿಜ್ಞಾನ ಭವನದಲ್ಲಿ, ರಾಜ್ಯದ ಮೂವರು ಹಾಗೂ ದೇಶದ 45 ಆದರ್ಶ ಶಿಕ್ಷಕರಿಗೆ, ರಾಷ್ಟ್ರ ಪ್ರಶಸ್ತಿ ನೀಡಿ, ಗೌರವಿಸಲಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ,** ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಶಿಕ್ಷಕರೊಂದಿಗೆ ಹೊಸ ದಿಲ್ಲಿಯಲ್ಲಿ ಸಂವಾದ ನಡೆಸಿದರು. ದೇಶದ ಯುವ ಶಕ್ತಿಯನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ದೇಶದ ಬುನಾದಿ ಹಾಗೂ ಸಶಕ್ತ ಸಮಾಜಕ್ಕೆ ಶಿಕ್ಷಕರ ಕೊಡುಗೆ ಅಪಾರ ಎಂದರು.

<><><>

**ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ** ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ, ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಮಲೆನಾಡ ಗಾಂಧಿ ಎಚ್.ಬಿ.ಗೋವಿಂದ ಗೌಡ ಪ್ರಶಸ್ತಿ ಪುರಸ್ಕೃತ ಶಾಲೆಗಳಿಗೆ ಹಾಗೂ ನ್ಯಾಕ್ ಮಾನ್ಯತೆ ಪಡೆದ, ಸರ್ಕಾರಿ ಮಹಾವಿದ್ಯಾಲಯಗಳಿಗೆ, ಅಭಿನಂದನಾ ಪತ್ರ ಪ್ರದಾನ ಸಮಾರಂಭ, ಇಂದು ಬೆಳಗ್ಗೆ 10 ಗಂಟೆಗೆ, ಬೆಂಗಳೂರಿನ, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಜರುಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಿದ್ದಾರೆ.

<><><>

**ರಾಜ್ಯದ ಪ್ರೌಢ ಶಾಲೆ** ಹಾಗೂ ಪ್ರಾಥಮಿಕ ಶಾಲೆಯಲ್ಲಿ, ಸೇವೆ ಸಲ್ಲಿಸುತ್ತಿರುವ, ಅತ್ಯುತ್ತಮ ಶಿಕ್ಷಕರಿಗೆ, ಆಯಾ ಜಿಲ್ಲೆಗಳ ಜಿಲ್ಲಾ ಉಸ್ತುವಾರಿ ಸಚಿವರುಗಳು, ಸನ್ಮಾನಿಸಿ ಗೌರವಿಸಲಿದ್ದಾರೆ.

<><><>

**ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಪಟ್ಟಿಯಲ್ಲಿ,** 'ಭಾರತೀಯ ತಂತ್ರಜ್ಞಾನ ಸಂಸ್ಥೆ ಮದ್ರಾಸ್' ಅಗ್ರಸ್ಥಾನದಲ್ಲಿದೆ. 'ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ' ಮತ್ತು 'ಬಾಂಬೆ ಭಾರತೀಯ ತಂತ್ರಜ್ಞಾನ ಸಂಸ್ಥೆ' ನಂತರದ ಸ್ಥಾನ ಪಡೆದಿವೆ. ಕಾನೂನು ಸಂಸ್ಥೆಗಳ ವಿಭಾಗದಲ್ಲಿ, 'ಬೆಂಗಳೂರಿನ ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ, ವಿಶ್ವವಿದ್ಯಾಲಯ' ಮೊದಲ ಸ್ಥಾನ ಗಳಿಸಿದೆ. ಕೇಂದ್ರದ, ಶಿಕ್ಷಣ ಖಾತೆ ಸಚಿವ, ಧರ್ಮೇಂದ್ರ ಪ್ರಧಾನ್, ಹೊಸ ದಿಲ್ಲಿಯಲ್ಲಿ, ಶ್ರೇಯಾಂಕ ಪಟ್ಟಿ ಬಿಡುಗಡೆ ಮಾಡಿದರು.

<><><>

**ಬೇಡ್ತಿ ನದಿ ನೀರಿನಿಂದ,** ಧಾರವಾಡ ಜಿಲ್ಲೆ, ಕಲಘಟಗಿ ತಾಲೂಕಿನ, 107 ಕೆರೆಗಳನ್ನು ತುಂಬಿಸುವ, 179 ಕೋಟಿ 50 ಲಕ್ಷ ರೂಪಾಯಿ ವೆಚ್ಚದ ಕಾಮಗಾರಿಗೆ, ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ನಡೆದ ಸಚಿವ ಸಂಪುಟ ಸಭೆ, ಅನುಮೋದಿಸಿದೆ.

<><><>

**ಗುಡ್ಡದ ಮಲ್ಲಾಪುರ ಏತ ನೀರಾವರಿ** ಯೋಜನೆ ಅಡಿ, ಹಾವೇರಿ ಜಿಲ್ಲೆ ಬ್ಯಾಡಗಿ ಹಾಗೂ ಹಾನಗಲ್ಲ ತಾಲೂಕಿನ, 137 ಕೆರೆಗಳನ್ನು ತುಂಬಿಸುವ, 115 ಕೋಟಿ 60 ಲಕ್ಷ ರೂಪಾಯಿ ವೆಚ್ಚದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದೆ.

<><><>

**ವಿಜಯಪುರ ಜಿಲ್ಲೆ, ಸಿಂದಗಿ ಪುರಸಭೆ** ಹಾಗೂ ಬೆಳಗಾವಿ ಜಿಲ್ಲೆ, ಸವದತ್ತಿ ಯಲ್ಲಮ್ಮ ಪುರಸಭೆ ಹಾಗೂ ಬೀದರ ಜಿಲ್ಲೆ ಹುಮ್ನಾಬಾದ ಪುರಸಭೆಯನ್ನು, ನಗರಸಭೆಯಾಗಿ ಮೇಲ್ದರ್ಜೆಗೇರಿಸಲು, ಸಂಪುಟ ನಿರ್ಧರಿಸಿದೆ.

<><><>

**ರಾಯಚೂರು ಜಿಲ್ಲೆ, ಲಿಂಗಸೂಗೂರು** ತಾಲೂಕು ಆಸ್ಪತ್ರೆಯಲ್ಲಿ, 50 ಹಾಸಿಗೆಗಳ ತೀವ್ರ ನಿಗಾ ಘಟಕ, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆಗೆ ಸಂಪುಟ ಅನುಮೋದಿಸಿದೆ.

<><><>

**ಹೊಸ ದಿಲ್ಲಿಯ ಸಮುದಾಯ ಬಾನುಲಿ ಸಂಘ** ಹಾಗೂ ಕರ್ನಾಟಕ ಘಟಕದ ಸಹಯೋಗದಲ್ಲಿ, ಇಂದು ಮತ್ತು ನಾಳೆ, ಕೋಲಾರದ 'ನಮ್ಮ ಧ್ವನಿ' ಸಮುದಾಯ ಬಾನುಲಿ ಕೇಂದ್ರದ ಸಹಯೋಗದಲ್ಲಿ, ಲಕ್ಕೇನಹಳ್ಳಿಯ 'ಮೈರಾಡ' ಸ್ಫೂರ್ತಿ ತರಬೇತಿ ಕೇಂದ್ರದಲ್ಲಿ, ರಾಜ್ಯದ ಸಮುದಾಯ ಬಾನುಲಿ ಕೇಂದ್ರಗಳ ನಿರ್ವಾಹಕರಿಗಾಗಿ, ವಿಶೇಷ ತರಬೇತಿ ಕಾರ್ಯಾಗಾರ, ಆಯೋಜಿತವಾಗಿದೆ. 'ಸ್ಥಳೀಯ ಸ್ವರಗಳ ಬಲವರ್ಧನೆ; ಸಮುದಾಯ ಬಾನುಲಿ ಸಾಮರ್ಥ್ಯ ನಿರ್ಮಾಣ' ಧ್ಯೇಯದೊಂದಿಗೆ, ಆಯೋಜಿತ ಕಾರ್ಯಾಗಾರವನ್ನು, ಇಂದು ಬೆಳಗ್ಗೆ 10 ಗಂಟೆಗೆ, 'ಮೈರಾಡ' ಆಡಳಿತ ಸಮಿತಿ ಸದಸ್ಯ, ಟಿ.ಎಂ. ವಿಜಯಭಾಸ್ಕರ್ ಉದ್ಘಾಟಿಸಲಿದ್ದಾರೆ.

<><><>

**ಕಾರ್ಯಾಗಾರದ ಕುರಿತು,** ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸಮುದಾಯ ಬಾನುಲಿ ಸಂಘಗಳ, ಕರ್ನಾಟಕ ಘಟಕದ ಅಧ್ಯಕ್ಷೆ, ರಶ್ಮಿ ಅಮ್ಮೆಂಬಳ.

<><><>

**'ಸಶಕ್ತ ಜೀವನಕ್ಕಾಗಿ,** ಸರಿಯಾದ ಆಹಾರ' ಧ್ಯೇಯದೊಂದಿಗೆ, ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹ ನಾಡಿದ್ದು, ಭಾನುವಾರದ ವರೆಗೆ ರಾಜ್ಯಾದ್ಯಂತ ಆಯೋಜಿತವಾಗಿದೆ. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಸಾರಥ್ಯದಲ್ಲಿ,ಅಪೌಷ್ಟಿಕತೆಯನ್ನು ಎದುರಿಸಲು, ಪೌಷ್ಟಿಕಾಂಶ ಸಪ್ತಾಹ ಆಚರಿಸಲಾಗುತ್ತಿದೆ. ಮಹಿಳೆಯರು ಹಾಗೂ ಮಕ್ಕಳ ಉತ್ತಮ, ಆರೋಗ್ಯಯುತ ಜೀವನಕ್ಕಾಗಿ, ಪೌಷ್ಟಿಕಾಂಶಯುಕ್ತ ಆಹಾರ ಪದ್ಧತಿಯ, ಮಹತ್ವದ ಬಗ್ಗೆ ಜಾಗೃತಿ ರಾಜ್ಯಾದ್ಯಂತ ಮೂಡಿಸಲಾಗುತ್ತಿದೆ.

<><><>

**ಧಾರವಾಡ ಕೃಷಿ ವಿಶ್ವವಿದ್ಯಾಲಯದ,** ಆಹಾರ ವಿಜ್ಞಾನ ವಿಭಾಗದ ಪ್ರಾಧ್ಯಾಪಕಿ ನಿರ್ಮಲಾ ಏಣಗಿ, ನಿತ್ಯದ ಆಹಾರದಲ್ಲಿ ಮೊಳಕೆ ಕಾಳುಗಳ ಮಹತ್ವ ತಿಳಿಸಿದ್ದಾರೆ.

<><><>

**ಧಾರವಾಡ ಕೃಷಿ ವಿಶ್ವವಿದ್ಯಾಲಯ,** ಇದೇ 13 ರಿಂದ 16ರ ವರೆಗೆ, 4 ದಿನಗಳ,ಕೃಷಿ ಮೇಳ ಆಯೋಜಿಸಿದೆ ಎಂದು, ಉಪ ಕುಲಪತಿ ಪಿ.ಎಲ್. ಪಾಟೀಲ, ತಿಳಿಸಿದ್ದಾರೆ. 'ಪೌಷ್ಟಿಕ ಆಹಾರ ಭದ್ರತೆಗೆ, ಮಣ್ಣಿನ ಆರೋಗ್ಯ ಮತ್ತು ಸಾಂಪ್ರದಾಯಿಕ ತಳಿಗಳು' ಎಂಬ ಶೀರ್ಷಿಕೆಯಡಿ, ಕೃಷಿ ಮೇಳ ಆಯೋಜಿತವಾಗಿದ್ದು, ಕೃಷಿಯಲ್ಲಿನ ಆಧುನಿಕ ತಂತ್ರಜ್ಞಾನಗಳು, ಅನ್ವೇಷಣೆಗಳು ಹಾಗೂ ರೈತರ ಸಮಸ್ಯೆಗಳಿಗೆ ಪರಿಹಾರಗಳನ್ನು ಪ್ರಚುರಪಡಿಸಲು, ಯೋಜಿಸಲಾಗಿದೆ, ಎಂದರು.  20 ಲಕ್ಷಕ್ಕಿಂತಲೂ ಹೆಚ್ಚು ರೈತರು ಭಾಗವಹಿಸುವ ನಿರೀಕ್ಷೆಯಿದೆ. ಕ್ಯೂ.ಆರ್. ಕೋಡ್ ಮೂಲಕ, ಕೃಷಿ ಮೇಳದಲ್ಲಿ ಪಾಲ್ಗೊಳ್ಳಲು, ಹೆಸರು ನೋಂದಾಯಿಸುವ ವ್ಯವಸ್ಥೆ ಕಲ್ಪಿಸಲಾಗಿದೆ..

<><><>

**ಉತ್ತರಕನ್ನಡ ಜಿಲ್ಲೆಯ,** ಮುಂಡಗೋಡ ತಾಲೂಕಿನ ಪ್ರಗತಿಪರ ಕೃಷಿಕ, ಬಸವರಾಜ ನಡುವಿನಮನಿ ಅವರಿಗೆ, ಮಿಲೆನಿಯರ್ ಫಾರ್ಮರ್ ಪ್ರಶಸ್ತಿ, ಜೇನು ಕೃಷಿಕ ಮಧುಕೇಶ್ವರ ಹೆಗಡೆ ಅವರಿಗೆ, ಥೈಲ್ಯಾಂಡ್‌ನ ಅಂತಾರಾಷ್ಟ್ರೀಯ ಪ್ರಶಸ್ತಿ ಹಾಗೂ ಪ್ರಯೋಗಶೀಲ ಕೃಷಿಕ, ನಾಗರಾಜ ನಾಯ್ಕ್, ಅನ್ವೇಷಕ ರೈತ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದರು.

<><><>

**'ವಿಕಸಿತ ಕೃಷಿ ಸಂಕಲ್ಪ ಅಭಿಯಾನ'**, ಮುಂಗಾರು ಪೂರ್ವ ಹಂಗಾಮಿನಲ್ಲಿ, ಎಲ್ಲ 6 ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಆಯೋಜಿಸಿ, 15 ದಿನಗಳಲ್ಲಿ, 175 ಗ್ರಾಮಗಳಿಗೆ ಭೇಟಿ ನೀಡಿ, 1 ಲಕ್ಷ 1 ಸಾವಿರದ 309 ರೈತರಿಗೆ, ಮಾಹಿತಿ ನೀಡಲಾಗಿದೆ ಎಂದು, ಉಪ ಕುಲಪತಿ ಪಿ.ಎಲ್. ಪಾಟೀಲ, ನುಡಿದರು.

<><><>

**ದೇಶಾದ್ಯಂತ ಇಂದು, ಮುಸ್ಲಿಂ ಬಾಂಧವರು,** ಈದ್–ಎ–ಮಿಲಾದ್–ಉನ್–ನಬಿ ಆಚರಿಸುತ್ತಿದ್ದಾರೆ. ಪ್ರವಾದಿ ಮುಹಮ್ಮದ್ ಅವರ, ಜೀವನ ಮತ್ತು ಬೋಧನೆಗಳನ್ನು, ಧಾರ್ಮಿಕ ವಿದ್ವಾಂಸರು ಹಾಗೂ ಉಲೇಮಾಗಳು, ಪ್ರಚುರ ಪಡಿಸಲಿದ್ದಾರೆ. ಈದ್ ಮಿಲಾದ್ ಹಿನ್ನೆಲೆ, ಮಿಲಾದ್ ಮೆಹ್ಫಿಲ್ ಮತ್ತು ಸೀರತ್ ಸಮ್ಮೇಳನಗಳನ್ನು ಆಯೋಜಿಸಲಾಗಿದೆ. ಮಿಲಾದ್ ಮೆರವಣಿಗೆ ಸಹ ಜರುಗಲಿದ್ದು, ಶ್ರದ್ಧಾ, ಭಕ್ತಿಯಿಂದ ಈದ್ ಆಚರಿಸಲು, ಸಿದ್ಧತೆ ಕೈಗೊಳ್ಳಲಾಗಿದೆ.

<><><>

**'ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ' ಧ್ಯೇಯದೊಂದಿಗೆ,** ಜುಲೈ 1 ರಿಂದ ಈ ತಿಂಗಳ 30ರ ವರೆಗೆ,90 ದಿನಗಳ, ಮಧ್ಯಸ್ಥಿಕೆ ಮೂಲಕ, ವಿಚಾರಣೆ ಹಂತದಲ್ಲಿರುವ ಪ್ರಕರಣಗಳನ್ನು, ಕಕ್ಷಿದಾರರು ಇತ್ಯರ್ಥಪಡಿಸಿಕೊಳ್ಳಲು, ಅವಕಾಶ ಕಲ್ಪಿಸಲಾಗಿದೆ ಎಂದು, ಶಿವಮೊಗ್ಗ ಪ್ರಧಾನ ಜಿಲ್ಲಾ ನ್ಯಾಯಾಧೀಶ, ಮಂಜುನಾಥ ನಾಯ್ಕ್ ತಿಳಿಸಿದ್ದಾರೆ. ಈ ತಿಂಗಳ 13 ರಂದು, 3ನೇ ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿತವಾಗಿದೆ. ಸಾವಿರದ 420 ಪ್ರಕರಣಗಳನ್ನು ಮಧ್ಯಸ್ಥಿಕೆಗಾಗಿ ಗುರುತಿಸಲಾಗಿದೆ. 112 ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಲಾಗಿದೆ ಎಂದರು. ಹೆಚ್ಚಿನ ಮಾಹಿತಿಗೆ ನಾಲ್ಸಾ ಕಾನೂನು ಉಚಿತ ಸಹಾಯವಾಣಿ, 1–5–1–0–0 ಗೆ ಕರೆ ಮಾಡುವಂತೆ ಕೋರಿದರು.

<><><>

- **ಇಂದು, ರಾಷ್ಟ್ರೀಯ ಶಿಕ್ಷಕರ** ದಿನ; ರಾಷ್ಟ್ರಪತಿ ಅವರಿಂದ, ದೇಶದ 45 ಆದರ್ಶ ಶಿಕ್ಷಕರಿಗೆ, ರಾಷ್ಟ್ರ ಪ್ರಶಸ್ತಿ ಪ್ರದಾನ.
- **ಕೋಲಾರದಲ್ಲಿ ಇಂದು ಮತ್ತು ನಾಳೆ,** ಸಮುದಾಯ ಬಾನುಲಿ ಸಾಮರ್ಥ್ಯ ವರ್ಧನೆ, ಕಾರ್ಯಾಗಾರ.
- **'ಸಶಕ್ತ ಜೀವನಕ್ಕಾಗಿ, ಸರಿಯಾದ ಆಹಾರ'** ಧ್ಯೇಯ; ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹ, ನಾಡಿದ್ದು ಸಂಪನ್ನ.
- **ಇದೇ 13 ರಿಂದ 16ರ ವರೆಗೆ,** ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, ಕೃಷಿ ಮೇಳ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>